ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4463

ಸದಸ್ಯರ ಹೆಸರು : ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)

ಉತ್ತರಿಸಬೇಕಾದ ದಿನಾಂಕ : 11–07–205

ಉತ್ತರಿಸುವ ಸಚಿವರು : ಬೃಹತ್ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ)

	ಪ್ರಶ್ನೆ	ಉತ್ತರ
ಅ	ಬೀಳಗಿ ತಾಲ್ಲೂಕಿನ ಕುಂದರಗಿ ಹಾಗೂ ಗಿರಿಸಾಗರ ಮತ್ತು ಜಮಖಂಡಿ ತಾಲೂಕಿನ ಮದರ ಖಂಡಿ ಗ್ರಾಮಗಳಲ್ಲಿ 110 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್ ಮಂಜೂ ರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೆ;	ಅ) ಬೀಳಗಿ ತಾಲೂಕಿನ ಕುಂದರಗಿ ಹಾಗೂ ಗಿರಿಸಾಗರ ಗ್ರಾಮಗಳಲ್ಲಿ 110 ಕೆ. ವಿ. ವಿದ್ಯುತ್ ಸಬ್‌ಸ್ಟೇಷನ್ ನಿರ್ಮಾಣದ ಬಗ್ಗೆ ಪ್ರಸ್ತಾವನೆಗಳನ್ನು ಸಿದ್ಧಪಡಿಸಲು ತಾಂತ್ರಿಕ ಮಾಹಿತಿಗಳನ್ನು ಸಂಗ್ರಹಿಸ ಲಾಗುತ್ತಿದೆ. ತಾಂತ್ರಿಕ ಮಾಹಿತಿಗಳನ್ನು ಸಂಗ್ರಹಿಸಿದ ನಂತರ, ಪ್ರಸ್ತಾವನೆಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತರ ತಾಂತ್ರಿಕ ಸಮಿತಿಯು ಈ ಸಂಬಂಧ ತೆಗೆದುಕೊಳ್ಳುವ ತೀರ್ಮಾನ ಗಳ ಪ್ರಕಾರ ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು. ಜಮಖಂಡಿ ತಾಲ್ಲೂಕಿನ ಮದರಖಂಡಿ ಗ್ರಾಮದಲ್ಲಿ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಮಾಡುವ ಪ್ರಸ್ತಾವನೆ ಸದ್ಯಕ್ಕೆ ಕ.ವಿ.ಪ್ರ.ನಿ.ನಿ.ಯ ಮುಂದೆ ಇರುವುದಿಲ್ಲ.
ಆ	ಹಾಗಿದ್ದಲ್ಲಿ, ಪ್ರತಿ ಯೋಜನೆಯ ಅಂದಾಜು ವೆಚ್ಚವೆಷ್ಟು;	ಅ) ಬೀಳಗೆ ತಾಲ್ಲೂಕಿನಲ್ಲಿ ಕುಂದರಗಿ ಮತ್ತು ಗಿರಿಸಾರಗ ಗ್ರಾಮಗಳಲ್ಲಿ 110 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆಗಳು ಇನ್ನೂ ಪ್ರಾರಂಭಿಕ ಹಂತದಲ್ಲಿರುವುದರಿಂದ, ಇವು ಸದ್ಯಕ್ಕೆ
ಇ	ಸರ್ಕಾರ ಇದುವರೆಗೆ ತೆಗೆದು ಕೊಂಡ ಕ್ರಮಗಳೇನು:	

ಈ	ಯಾವಾಗ ಮಂಜೂರತಿ ನೀಡ ಲಾಗುವುದು?	ಉದ್ಭವಿಸುವುದಿಲ್ಲ. ಜಮಖಂಡಿ ತಾಲ್ಲೂಕಿನ ಮದರಖಂಡಿ ಗ್ರಾಮದಲ್ಲಿ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಮಾಡುವ ಪ್ರಸ್ತಾವನೆ ಸದ್ಯಕ್ಕೆ ಇಲ್ಲದೇ ಇರುವುದರಿಂದ ಇದರ ಬಗ್ಗೆ ಈ ವಿಷಯದಲ್ಲಿ ಮುಂದಿನ ಕ್ರಮ ಗಳನ್ನು ತೆಗೆದುಕೊಳ್ಳುವ ಪ್ರಶ್ನೆ ಈಗ ಇರುವುದಿಲ್ಲ.

ಪ್ರಶ್ನೆ ಸಂಖ್ಯೆ : 401(4463)

ಉತ್ತರ ಲಗತ್ತಿಸಿದೆ.

ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ :– ಮಾನ್ಯ ಅಧ್ಯಕ್ಷರೇ, ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ಅತಿ ಹಿಂದುಳಿದ ತಾಲ್ಲೂಕು ಆಗಿರುವುದರಿಂದ ಮತ್ತು ಆಲಮಟ್ಟಿ ಹಿನ್ನೀರಿನಿಂದ ಬೀಳಗೆ ತಾಲ್ಲೂಕಿನ ಸುಮಾರು 54 ಹಳ್ಳಿಗಳು ಮುಳುಗಿದ್ದರೂ ಅಲ್ಲಿ ಕೇವಲ 110 ಕೆ.ವಿ.ಸ್ಟೇಷನ್‌ಗಳು, ಬೀಳಗಿ ಮತ್ತು ಕಾತರಕಿಯಲ್ಲಿ ಒಂದೊಂದು ಇವೆ. 33 ಕೆ.ವಿ.ಸ್ಟೇಷನ್ ಗಲಗಲಿ ತೆಗ್ಗಿ ಮತ್ತು ಸಿದ್ದಾಪುರದಲ್ಲಿ ಮಾತ್ರ ಇದೆ. ಆದರೆ ಇಲ್ಲಿ ಬೀಳಗಿ ವಿಧಾನ ಸಭಾ ಕ್ಷೇತ್ರದಲ್ಲಿ ಜಮಖಂಡಿ ತಾಲ್ಲೂಕಿನ ಸುಮಾರು 33 ಹಳ್ಳಿಗಳು ಇಲ್ಲಿ ಸೇರುತ್ತಿರುವುದರಿಂದ, ಜಮಖಂಡಿ ತಾಲ್ಲೂಕಿನ ಮದರಖಂಡಿ ಗ್ರಾಮದಲ್ಲಿ 110 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಮಾಡುವ ಪ್ರಸ್ತಾವನೆ ಸಧ್ಯಕ್ಕೆ ಕೆಪಿಟಿಸಿಎಲ್ ಮುಂದೆ ಇರುವುದಿಲ್ಲವೆಂದು ಸನ್ಮಾನ್ಯ ಸಚಿವರು ಉತ್ತರಿಸಿದ್ದಾರೆ. ಆದರೆ ನಾನು ಕೇಳುತ್ತಿರುವುದು ಮದರಖಂಡಿ ಗ್ರಾಮವಲ್ಲ. ಜಮಖಂಡಿ ತಾಲ್ಲೂಕಿನ ಮರಿಗುದ್ದಿ ಗ್ರಾಮ. ಮರಿಗುದ್ದಿ ಗ್ರಾಮದಲ್ಲಿ ವಿದ್ಯುತ್ತಿನ ಅಭಾವ ಬಹಳ ಇರುವುದರಿಂದ ಕುಂದರಗಿ, ಗಿರಿಸಾಗರ ಮತ್ತು ಜಮಖಂಡಿ ತಾಲ್ಲೂಕಿನ ಮರಿಗುದ್ದಿ ಗ್ರಾಮದಲ್ಲಿ 110 ಕೆ.ವಿ.ಸ್ಟೇಷನ್‌ಗಳನ್ನು ಬೇಗನೇ ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಸಭಾಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ಬೀಳಗಿ ತಾಲ್ಲೂಕಿನ ಕುಂದರಂಗಿ ಹಾಗೂ ಗಿರಿಸಾಗರ ಗ್ರಾಮಗಳಲ್ಲಿ 110 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಮಾಡಬೇಕೆಂಬ ಪ್ರಸ್ತಾಪನೆ ಸರ್ಕಾರದ ಮುಂದೆ, ಕೆ.ಪಿ.ಟಿ.ಸಿ.ಎಲ್. ಮುಂದೆ ಇದೆ. ಇದಕ್ಕೆ ಬೇಕಾಗಿರತಕ್ಕಂಥ ಟೆಕ್ನಿಕಲ್ ಡೇಟಾ ರಿಪೋರ್ಟ್‌ನ್ನು ಸಬ್‌ಮಿಟ್ ಮಾಡುವುದಕ್ಕೆ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಇದನ್ನು ಈಗ ತಾಂತ್ರಿಕ ಸಮಿತಿ ಮುಂದಿಟ್ಟಿದ್ದೇವೆ. ತಾಂತ್ರಿಕ ಸಮಿತಿ ಮುಂದೆ ಇಟ್ಟಮೇಲೆ ಉಳಿದಿರತಕ್ಕಂಥದು ಆಟೋ ಮ್ಯಾಟಿಕ್ ಆಗಿ ಫಾಲೋ ಆಗುತ್ತದೆ. ಪರ್ಟಿಕ್ಯುಲರ್ ಆಗಿ ಬೀಳಗಿ ತಾಲ್ಲೂಕಿನಲ್ಲಿ ಪಂಪ್ ಸೆಟ್‌ಗಳು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ರೈತರು ವಿದ್ಯುತ್‌ನ ಉಪಯೋಗ ಜಾಸ್ತಿ ಮಾಡುತ್ತಿರುವುದರಿಂದ ಈ ಸಬ್–ಸ್ಟೇಷನ್ ಅವಶ್ಯಕತೆಯನ್ನು ಮನಗಂಡು ಕೆ.ಪಿ.ಟಿ.ಸಿ.ಎಲ್. ನವರು ಈ ನಿರ್ಧಾರಕ್ಕೆ

ಬಂದಿದ್ದಾರೆ. ಆದ್ದರಿಂದ, ಈ ಕೆಲಸ ಪ್ರಾರಂಭ ಮಾಡುವುದಕ್ಕೆ ನಾವು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕಂಥ ಪ್ರಶ್ನೆಯಲ್ಲಿ ಜಮಖಂಡಿ ತಾಲ್ಲೂಕಿನ ಮದರಖಂಡಿ ಗ್ರಾಮ ಎಂದು ಪ್ರಿಂಟ್ ಆಗಿದೆ. ಇಲ್ಲಿ ಮದರಯಂಡಿ ಬದಲು ಮರಗುದ್ದಿಗ್ರಾಮ ಎಂದು ಬದಲಾವಣೆ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ತಪ್ಪಾಗಿ ಪ್ರಿಂಟ್ ಆಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ತಪ್ಪಾಗಿ ಪ್ರಿಂಟ್ ಆಗಿದ್ದರೆ ಅದನ್ನು ನಾವು ಸರಿ ಮಾಡಿಕೊಳ್ಳುತ್ತೇವೆ.

ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ: ಇದನ್ನು ತಿದ್ದುಕೊಂಡ ಮೇಲೆ ಅಲ್ಲಿ ಪ್ರಾರಂಭ ಮಾಡಬೇಕು.